# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಳಿಯಾಳ.

## ಸಿ.ಸಿ.ನಂಬರ. 117/2019

ಫಿರ್ಯಾದಿ : ಕರ್ನಾಟಕ ಸರಕಾರ ವನ್ಯಜೀವಿ
ವಲಯ ಅರಣ್ಯ ಅಧಿಕಾರಿ, ಹಳಿಯಾಳ.

ವಿರುದ್ಧ

ಆರೋಪಿತರು : 1. ನಿನ್ನು ತಂದೆ ದೂಳು ಪೊಂಡೆ,
ವಯಸ್ಸು : 25 ವರ್ಷ, ಸಾಃ ಜಮಗಾ, ತಾಃ ಹಳಿಯಾಳ, ಜಿ : ಉ.ಕ.

2. ಬಾಬು ಮಧುಜೋರೆ,ವಯಸ್ಸು : 25 ವರ್ಷ, ಸಾಃ ಅಮಗಾ,
ತಾಃ ಹಳಿಯಾಳ, ಜಿ : ಉ.ಕ.

ದೋಷಾರೋಪಣೆ

ಶ್ರೀ. ದೇಶಭೂಷಣ ಕೌಜಲಗಿ, ಬಿ.ಎ., ಎಲ್.ಎಲ್.ಬಿ., ಪ್ರ.ದ.ನ್ಯಾದಂ., ಹಳಿಯಾಳ ಆದ ನಾನು ಈ ಮೂಲಕ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ದಿಃ 29-04-2009 ರಂದು ಭಾಗ ವನಪಾಲಕ ಜಮಾಗಾ ಹಾಗೂ ಸಿಬ್ಬಂದಿಯವರು ದಾಂಡೇಲಿ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಕುಳಗಿ ವಜ್ಯಜೀವಿ ಜಮಾಗಾ ಶಾಖೆಯಲ್ಲಿ ಗಸ್ತು ತಿರುಗುತ್ತಿರುವ ಸಂದರ್ಭದಲ್ಲಿ ಕುಳಗಿ ಅಂಬಿಕಾನಗರ ರಸ್ತೆಯ ನಾಗಜರಿ ಕೋಳಕ್ಕೆ ಹೋಗುವ ದಾರಿಯಲ್ಲಿ ಬ್ಲಾಕ್ ನಂ-04 ರಲ್ಲಿ ಸಿಬ್ಬಂದಿಗಳು ಕಾದು ಕುಳಿತು ಬಹಳ ಸಮಯದ ನಂತರ ಕಾಲುದಾರಿಯಲ್ಲಿ ಮೊದಲಿಗೆ 2 ನಾಯಿಗಳು ಬಂದು ನಂತರ ನಾಯಿಗಳ ಹಿಂದೆ ಆರೋಪಿತರಾದ ನೀವು ಕೈಯಲ್ಲಿ ಟವಲಿನಲ್ಲಿ ಕಟ್ಟಿದ ಗಂಟು ಸಮೇತ ಬಂದಾಗ ಗಂಟನ್ನು ಬಿಚ್ಚಿ ನೋಡಲಾಗಿ ಅದರಲ್ಲಿ ಮರದ ನಾರಿನ ಬಳ್ಳಿಯಿಂದ ಕಟ್ಟಿದ್ದ ಜೀವಂತ ಉಡ ಪ್ರಾಣಿ ಇದ್ದು ಮತ್ತು ಕೂಡಲಿ ಇದ್ದು , ಪಂಚಜನರ ಸಮಕ್ಷಮ ಅಟಕ ಮಾಡಿದ್ದು ಪಂಚನಾಮ ಮಾಡಿ ತಮ್ಮ ವಶಕ್ಕೆ ಪಡೆದು ಆರೋಪಿತರಿಂದ ಹೇಳಿಕೆಯನ್ನು ಪಡೆದು ಈ ಮೂಲಕ ನೀವು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ರ ಸೆಕ್ಷನ್ 2(16) 9, 27, 38 (V) 51 ರ ಕಾಯ್ದೆಯಡಿಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ.

ಆರೋಪಿ ಕ್ರ.1.

ಪ್ರಶ್ನೆ 1 : ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?
ಉತ್ತರ :

ಪ್ರಶ್ನೆ 2 : ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೆ ?
ಉತ್ತರ :

ಆರೋಪಿ ಕ್ರ.2.

ಪ್ರಶ್ನೆ 1 : ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?
ಉತ್ತರ :

ಪ್ರಶ್ನೆ 2 : ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೆ ?
ಉತ್ತರ :

ಸದರಿ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಜರುಗುವುದರಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ .

ಸ್ಥಳ : ಹಳಿಯಾಳ.
ದಿನಾಂಕ : 16- 12 -2021. ಪ್ರ.ದ.ನ್ಯಾದಂ., ಹಳಿಯಾಳ.